## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

## ನ್ಯಾಯಾಲಯ, ಶಿಡ್ಲಘಟ್ಟ

**ಸಿ ಸಿ ನಂ. 748/2015**

ಸಿ ಡಬ್ಲ್ಯು.1.
ಪಿ ಡಬ್ಲ್ಯು.1.

ಸಾಕ್ಷಿದಾರರ ಹೆಸರು ... ಲಿಯಾಕತ್ ಉಲ್ಲಾ

ತಂದೆಯ ಹೆಸರು ... ಸಮೀಉಲ್ಲಾ

ವಯಸ್ಸು ... **38** ವರ್ಷ

ಉದ್ಯೋಗ ... ಪಿ.ಎಸ್.ಐ

ವಾಸ ... ಚನ್ನಪಟ್ಟಣ, ರಾಮನಗರ ಜಿಲ್ಲೆ

ಪ್ರಮಾಣವಚನದ ನಂತರದ ದಿಃ **29.12.2023**

ಮುಖ್ಯ ವಿಚಾರಣೆ ಮಾನ್ಯ ಎಪಿಪಿ ರವರಿಂದಃ-

ನಾನು ದಿಃ **03.07.2014** ರಿಂದ **05.02.2015** ರವರೆಗೂ ಶಿಡ್ಲಘಟ್ಟ ಗ್ರಾಮಾಂತರ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ **28.01.2015** ರಂದು ಮಃ **02.30** ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಕೈವಾರದಿಂದ ಗೊರಮಡಗು ಕ್ರಾಸಿಗೆ ಹೋಗುವ ದಾರಿಯಲ್ಲಿ ಒಬ್ಬ ಆಸಾಮಿ ಅಕ್ರಮವಾಗಿ ಮದ್ಯಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಬಾತ್ಮಿದಾರರಿಂದ ಬಂದ ಮಾಹಿತಿಯ ಮೇರೆಗೆ ನಾನು ಮತ್ತು ಚಾಸಾ.**5 ,6** ಮತ್ತು **7** ರವರನ್ನು ಕರೆದುಕೊಂಡು ಮ.**2.45** ಗಂಟೆ ಶಿಡ್ಲಘಟ್ಟ ಸರ್ಕಾರಿ ಬಸ್ ನಿಲ್ದಾಣದ ಬಳಿ ಪಂಚರಾದ ಚಾಸಾ.**2** ರಿಂದ **4** ರವರಿಗೆ ಬಾತ್ಮಿದಾರರಿಂದ ಬಂದ ಮಾಹಿತಿಯನ್ನು ತಿಳಿಸಿದ್ದು ಪಂಚರಾಗಿ ಸಹಕರಿಸಲು ಅವರು ಒಪ್ಪಿಕೊಂಡು ಮೇರೆಗೆ ಎಲ್ಲರೂ ಸುಮಾರು **3** ಗಂಟೆಯಲ್ಲಿ ಗೊರಮಡಗು ಕ್ರಾಸ್ ನ ಬಳಿ ಇರುವ ತಂಗುದಾಣದ ಮರೆಯಲ್ಲಿ ನಿಂತು ಕಾಯುತ್ತಿದ್ದಾಗ ಒಬ್ಬ ಅಸಾಮಿ ಕೈವಾರದ ಕಡೆ ಇಂದ ಗೊರಮಡಗು ಕ್ರಾಸ್ ನ ದ್ವಿಚಕ್ರ ವಾಹನವಾದ ಫ್ಯಾಷನ್ ಪ್ರೋ ಬೈಕಿನಲ್ಲಿ ಬಂದಿದ್ದು, ಸದರಿ ವಾಹನದಲ್ಲಿ ಒಂದು ಬಿಳಿ ಬಣ್ಣದ ಚೀಲವನ್ನು

ಇಟ್ಟುಕೊಂಡಿದ್ದು ಅದನ್ನು ಪರಿಶೀಲಿಸಲಾಗಿ **3** ರಟ್ಟಿನ ಬಾಕ್ಸ್ ಗಳಿದ್ದು ಒಂದು ಬಾಕ್ಸನ್ನು ಪರಿಶೀಲಿಸಲಾಗಿ ಅದರಲ್ಲಿ **90** ಎಂ.ಎಲ್ ನ **96** ರಾಜಾವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕುಗಳು ಕಂಡು ಬಂದಿರುತ್ತವೆ. ಮತ್ತೊಂದು ರಟ್ಟಿನ ಬಾಕ್ಸನ್ನು ಪರಿಶೀಲಿಸಲಾಗಿ **650** ಎಂ.ಎಲ್ ನ **12** ಕಿಂಗ್ ಫಿಶರ್ ಬಿಯರ್ ಬಾಟಲುಗಳು ಕಂಡು ಬಂದಿರುತ್ತವೆ. ಹಾಗೂ ಮತ್ತೊಂದು ಬಾಕ್ಸಿನಲ್ಲಿ **650** ಎಂ.ಎಲ್ ನ **12** ನಾಕೌಟ್ ಬಿಯರ್ ಬಾಟಲುಗಳು ಕಂಡು ಬಂದಿರುತ್ತದೆ. ಸದರಿ ಮದ್ಯವನ್ನು ಸಾಗಾಣಿಕೆ ಮಾಡಲು ಪರವಾನಗಿ ಇದೆಯೇ ಎಂದು ಕೇಳಲಾಗಿ ಸದರಿ ಆಸಾಮಿ ಯಾವುದೇ ಪರವಾನಗಿ ಇಲ್ಲ ಎಂದು ಹೇಳಿದ್ದು, ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಆತ ತನ್ನ ಹೆಸರು ವಾಜಿದ್ ಬಿನ್ ಹಿಮಾಮ್ ಸಾಬ್ ಸುಬ್ಬರಾಯನಪೇಟೆ ಎಂದು ತಿಳಿಸಿರುತ್ತಾರೆ. ನಂತರ ಆರೋಪಿಯ ದ್ವಿಚಕ್ರ ವಾಹನ ಸಂಖ್ಯೆ ಕೆಎ **40** ಕ್ಯೂ **754,** ಆತನ ಬಳಿ ಇದ್ದ ಒಂದು ಕಾರ್ಬನ್ ಮೊಬೈಲ್ ಫೋನ್ ಹಾಗೂ ಮದ್ಯ ಹಾಗೂ ಒಂದು ಬಿಳಿಯ ಚೀಲವನ್ನು ವಶಪಡಿಸಿಕೊಂಡು ಚಾಸಾ.**2** ರಿಂದ **4** ರವರ ಸಮಕ್ಷಮ ಮ.**3.15** ರಿಂದ ಸಂಜೆ **4.15** ರವರೆಗೆ ಅಮಾನತು ಪಂಚನಾಮೆಯನ್ನು ಜರುಗಿಸಿ ಒಂದು ಬಿಳಿಯ ಚೀಲದಲ್ಲಿ ಸೀಜ್ ಮಾಡಿ ಆರ್ ಎಂಬ ಅಕ್ಷರದಿಂದ ಸೀಲ್ ಮಾಡಲಾಗಿರುತ್ತದೆ. ನಂತರ ಆರೋಪಿ, ವಾಹನ ಮತ್ತು ಮದ್ಯವನ್ನು ಸಂಜೆ **5** ಗಂಟೆಗೆ ಠಾಣೆಗೆ ಹಾಜರಾಗಿ ಸ್ವವರದಿಯನ್ನು ನೀಡಿ, ಪ್ರಕರಣವನ್ನು ದಾಖಲಿಸಲಿಸಿಕೊಂಡಿರುತ್ತೇನೆ. ಮಹಜರನ್ನು ನಿಪಿ.**1,** ಸಾಕ್ಷಿಯ ಸಹಿಯನ್ನು ನಿಪಿ.**1** ಎ ಎಂದು, ಸ್ವ ವರದಿಯನ್ನು ನಿಪಿ.**2** ಎಂದು, ಸಾಕ್ಷಿಯ ಸಹಿಯನ್ನು ನಿಪಿ.**2** ಎ ಎಂದು, ಪ್ರ.ವ.ವರದಿಯನ್ನು ನಿಪಿ.**3** ಎಂದು, ಸಾಕ್ಷಿಯ ಸಹಿಯನ್ನು ನಿಪಿ.**3** ಎ ಎಂದು, ಮಾಲುಪಟ್ಟಿಯನ್ನು ಸಂಖ್ಯೆ **20/2015** ನಿಪಿ.**4** ಎಂದು ಸಾಕ್ಷಿಯ ಸಹಿಯನ್ನು ನಿಪಿ.**4** ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ **3** ರಟ್ಟಿನ ಬಾಕ್ಸಿನಲ್ಲಿದ್ದ ಖಾಲಿ ತಲಾ **12** ನಾಕೌಟ್ ಹಾಗೂ ಕಿಂಗ್ ಫಿಶರ್ ಬಿಯರ್ ಬಾಟಲುಗಳು ಮತ್ತು ರಾಜಾವಿಸ್ಕಿಯ ಖಾಲಿ ನೋಡಿ ಗುರುತಿಸಿರುತ್ತಾರೆ. **24** ಬಿಯರ್ ಖಾಲಿ ಬಿಯರ್ ಬಾಟಲುಗಳು ಹಾಗೂ **96** ಮದ್ಯದ ಟೆಟ್ರಾ ಪ್ಯಾಕಗಳನ್ನು ಒಟ್ಟಾಗಿ ಮು.ಮಾ.**1** ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿ ಹಾಜರಿದ್ದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಸಂಜೆ ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾದೀಶರ ಮುಂದೆ ಹಾಜರುಪಡಿಸಿರುತ್ತಾರೆ.

ದಿ:**24.05.2015** ರಂದು ಸಾಕ್ಷಿದಾರರಾದ ಚಾಸಾ.**3** ಮತ್ತು **4** ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ:**29.01.2015** ರಂದು ಚಾಸಾ.**5** ರಿಂದ **7** ರವರ ಹೇಳಿಕೆಯನ್ನು ಸಹ ಪಡೆದುಕೊಂಡಿರುತ್ತೇನೆ. ದಿ:**06.03.2015** ರಂದು ಸದರಿ ಪ್ರಕರಣದಲ್ಲಿ ಅಮಾನತು ಪಡಿಸಿಕೊಂಡ ಎಲ್ಲಾ ದಾಖಲೆಗಳನ್ನು ಎಫ್.ಎಸ್.ಎಲ್ ರಾಸಾಯನಿಕ ಪರೀಕ್ಷೆಗಾಗಿ ಹೆಚ್.ಸಿ.**134** ನಂಜುಂಡೇಗೌಡ ಹಾಗೂ ಸಿಪಿಸಿ **164** ಬಾಲಾಜಿಗೌಡರವರ ಜೊತೆ ಕಳುಹಿಸಿಕೊಟ್ಟಿರುತ್ತೇನೆ. ದಿ:**13.03.2015** ರಂದು ಎಫ್.ಎಸ್.ಎಲ್ ನ ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ. ದಿ:**20.03.2015** ರಂದು ಸದರಿ ಪ್ರಕರಣದಲ್ಲಿ ಅಮಾನತುಪಡಿಸಿಕೊಂಡ ದ್ವಿಚಕ್ರ ವಾಹನವನ್ನು ಎಎಸ್ಐ ಮಾರ್ಕೊಂಡಪ್ಪರವರಿಗೆ ನ್ಯಾಯಾಲಯದ ಆದೇಶದಂತೆ ವರ್ಗಾಯಿಸಿರುತ್ತೇನೆ. ದಿ:**27.03.2015** ರಂದು ಸದರಿ ಪ್ರಕರಣದಲ್ಲಿ ಆರೋಪಿ ವಿರುದ್ಧ ಆರೋಪಿ ಸಾಬೀತಾದ ಹಿನ್ನೆಲೆಯಲ್ಲಿ ವಿದಿವಿಜ್ಞಾನ ವರದಿಯನ್ನು ಹೊರತುಪಡಿಸಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ.ಆರ್ /ಎಂ.ಪಿ.ಆರ್ ವಕೀಲರಿಂದಃ</u>-

ಬಾತ್ಮಿದಾರರಿಂದ ಬಂದ ಮಾಹಿತಿಯನ್ನು ಠಾಣಾ ದಿನಚರಿಯಲ್ಲಿ ನಮೂದಿಸಿರುವ ಬಗ್ಗೆ ನನಗೆ ಈಗ ನೆನಪಿಲ್ಲ. ಶಿಡ್ಲಘಟ್ಟ ಗ್ರಾ.ಪೋ.ಠಾಣೆ ಇಂದ ಗೊರಮಡಗು ಕ್ರಾಸಿಗೆ ಸು.**5** ರಿಂದ **8** ಕಿ.ಮೀ ಅಂತರ ಇರಬಹುದು. ಚಾಸಾ.**2** ರಿಂದ **4** ರವರಿಗೆ ಯಾವುದೇ ನೋಟೀಸನ್ನು ಜಾರಿ ಮಾಡಿರುವುದಿಲ್ಲ. ಮೌಖಿಕವಾಗಿ ಪಂಚರಾಗಿ ಸಹಕರಿಸಲು ಕೋರಿಕೊಂಡಿರುತ್ತೇನೆ. ನಾವು ಠಾಣೆ ಇಂದ ಹೊರುಟಾಗಿ ಮ.ಸು.**2.30** ನಿಮಿಷ ಆಗಿರುತ್ತದೆ. ಚಾಸಾ.**2** ರಿಂದ **4** ರವರು ಶಿಡ್ಲಘಟ್ಟ ಸರ್ಕಾರಿ ಬಸ್ ನಿಲ್ದಾಣದ ಟಿಬಿ ರಸ್ತೆಯಲ್ಲಿ ಇದ್ದರು. ಮ.ಸು.**2.50** ನಕ್ಕೆ ಚಾಸಾ.**2** ರಿಂದ **4** ರವರನ್ನು ಇಲಾಖಾ ಜೀಪಿನಲ್ಲಿ ಬಾತ್ಮಿದಾರರಿಂದ ಬಂದ ಮಾಹಿತಿ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ. ಸದರಿ ಸ್ಥಳಕ್ಕೆ ಹೋದಾಗ ಮ.**3.00** ಗಂಟೆ ಸಮಯ ಆಗಿತ್ತು. ಗೊರಮಡಗು ಕ್ರಾಸಿನ ತಂಗುದಾಣದಲ್ಲಿ ಯಾರು ಜನರು ಇರಲಿಲ್ಲ. ಸದರಿ ತಂಗುದಾಣದ ಆಜುಬಾಜಿನಲ್ಲಿ ಮನೆಗಳು ಇರುತ್ತವೆ ಎಂದರೆ ಸರಿ ಅಲ್ಲ. ಸಾಕ್ಷಿ ದೂರದಲ್ಲಿ ಇರುತ್ತವೆ ಎಂದು ಹೇಳುತ್ತಾರೆ. ಶಿಡ್ಲಘಟ್ಟ ಠಾಣೆ ಇಂದ ನಾನು ಹೇಳಿದ ಘಟನಾ ಸ್ಥಳಕ್ಕೆ ಸು.**15** ಕಿ.ಮೀ ಅಂತರ ಇದೆ ಎಧ್ದರೆ ಸರಿ ಅಲ್ಲ.

ಸದರಿ ಅಂತರವನ್ನು ಕ್ರಮಿಸಲು ಸು30 ನಿಮಿಷಕ್ಕೂ ಹೆಚ್ಚು ಸಮಯ ಬೇಕು ಎಂದರೆ ಸರಿ ಅಲ್ಲ. ಕೈವಾರದಿಂದ ಶಿಡ್ಲಘಟ್ಟಕ್ಕೆ ಬರಲು ಗೊರಮಡಗು ಕ್ರಾಸಿನ ರಸ್ತೆಯನ್ನು ಯಾರು ಬಳಸುವುದಿಲ್ಲ ಎಂದರೆ ಸರಿ ಅಲ್ಲ. ಪ್ರಕರಣ ಅಬಕಾರಿ ಇಲಾಖ ಬ್ಯಾಪ್ತಿಗೆ ಬರುವುದರಿಂದ ಸದರಿಯವರಿಗೆ ಮಾಹಿತಿ ವಿಚಾರವನ್ನು ತಿಳಿಸಬೇಕಿತ್ತು ಎಂದರೆ ಸಾಕ್ಷಿ ನಮ್ಮ ಇಲಾಖ ವ್ಯಾಪ್ತಿಗೂ ಸಹ ಸದರಿ ಅಪರಾದದ ದಾಳಿ ಮಾಡಲು ಆದೇಶ ಇರುತ್ತದೆ ಎಂದು ಹೇಳುತ್ತಾರೆ. ದಾಳಿ ಮಾಡುವ ಸಮಯದಲ್ಲಿ ಹಾಗೂ ಮಹಜರಿನ ಸಮಯದಲ್ಲಿ ಗೊರಮಡಗು ಗ್ರಾಮದ ಗ್ರಾಮಸ್ಥರು ಯಾರು ಇರಲಿಲ್ಲ ಎಂದರೆ ಸರಿ. ದಾಳಿ ಮಾಡಿದ ರಸ್ತೆ ಸಂಚಾರ ದಟ್ಟಣೆ ಇಂದ ಕೂಡಿರುವ ರಸ್ತೆ ಎಂದರೆ ಸರಿ ಅಲ್ಲ. ಯಾವುದೇ ಮಧ್ಯದ ಟೆಟ್ರಾ ಪ್ಯಾಕ್ ಹಾಗೂ ಬಾಟಲುಗಳ ಮೇಲೆ ಬಾರ್ ಕೋಡುಗಳು ಇರುತ್ತವೆ ಎಂದರೆ ಸರಿ. ಸದರಿ ಬಾರ್ ಕೋಡ್ ನಿಂದ ಮಧ್ಯವನ್ನು ಎಲ್ಲಿಂದ ಕರೀದಿ ಮಾಡಲಾಗಿದೆ ಎಂದು ಕಂಡು ಬರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ.

**2.** ಆರೋಪಿ ಬರುತ್ತಿದ್ದ ದ್ವಿಚಕ್ರ ವಾಹನದ ಬಣ್ಣ ಕಪ್ಪು ಬಣ್ಣದ್ದಾಗಿರುತ್ತದೆ ಸದರಿ ವಾಹನ ಯಾರಿಗೆ ಸೇರಿದ್ದು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ವಾಹನದ ದಾಖಲೆಯನ್ನು ಅಬಕಾರಿ ಇಲಾಖೆಗೆ ನ್ಯಾಯಾಲಯದ ಆದೇಶದಂತೆ ವರ್ಗಾಯಿಸಿರುತ್ತೇನೆ. ಸ್ಥಳ ಮಹಜರನ್ನು ಮ.3.15 ರಿಂದ 4.15 ರವರೆಗೆ ನಡೆಸಲಾಗಿರುತ್ತದೆ. ಅಮಾನತುಪಡಿಸಿಕೊಂಡ ಎಲ್ಲಾ ಮಧ್ಯವನ್ನು ಎಫ್.ಎಸ್.ಎಲ್ ವರದಿಗಾಗಿ ಕಳುಹಿಸಿಕೊಡಲಾಗಿರುತ್ತದೆ. ಅಮಾನತುಪಡಿಸಿಕೊಂಡ ಮಧ್ಯದಿಂದ ಯಾವುದೇ ಮಧ್ಯವನ್ನು ತೆಗೆದಿರುವುದಿಲ್ಲ. ಎಲ್ಲವನ್ನೂ ಒಟ್ಟಾಗಿ ಹಾಗೆಯೇ ಎಫ್.ಎಸ್.ಎಲ್ ಪರೀಕ್ಷೆಗಾಗಿ ಆರ್. ಎಂಬ ಅಕ್ಷರದಿಂದ ಸೀಸ್ ಮಾಡಿ ಕಳುಹಿಸಿಕೊಡಲಾಗಿರುತ್ತದೆ. ಸೀಸ್ ಮಾಡಿದ ನಂತರ ಚಾಸಾ.2 ರಿಂದ 4 ರವರ ಸಹಿಯನ್ನು ತೆಗೆದುಕೊಳ್ಳಲಾಗಿರುತ್ತದೆ. ಪಂಚರ ಯಾವುದೇ ಸಹಿ ತೆಗೆದುಕೊಂಡಿಲ್ಲ ಎಂದರೆ ಸರಿ ಅಲ್ಲ. ಯಾವುದೇ ಮಧ್ಯವನ್ನು ಎಫ್.ಎಸ್.ಎಲ್ ಗೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿ ಅಲ್ಲ. ಈ ಪ್ರಕರಣದಲ್ಲಿ ನಾನೇ ದೂರುದಾರ ಮತ್ತು ತನಿಖಾದಿಕಾರಿ ಎಂದರೆ ಸರಿ . ಪ್ರಕರಣಕ್ಕೂ ಆರೋಪಿಗೂ ಯಾವುದೇ ರೀತಿ ಸಂಬಂದ ಇಲ್ಲದೇ ಇದ್ದರೂ ಸಹ ಠಾಣೆ ಅಂಕಿ ಅಂಶದ ಸಲುವಾಗಿ ಆರೋಪಿ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಅಲ್ಲ. ನಿಪಿ.1 ನ್ನು ಠಾಣೆಯಲ್ಲಿ ತಯಾರು ಮಾಡಲಾಗಿದೆ ಎಂದರೆ ಸ ರಿ ಅಲ್ಲ.

ಆರೋಪಿಗೂ ಮು.ಮಾಗಳಿಗೂ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ಸರಿ ಅಲ್ಲ,

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು.)

ಓ ಹೇ ಕೇ ಸ ಇದೆ.

ಪ್ರಧಾನ ಸಿ. ನ್ಯಾ. ಮತ್ತು
ಜೆಎಂಎಫ್, ಶಿಡ್ಲಘಟ್ಟ